

ಕಳ್ಳನು ಮನದಲ್ಲಿ ಹಿಗ್ಗಿ ತಮ್ಮ ಈ ಔದಾರ್ಯ ದೊಡ್ಡದು ಮಹಾ ಪ್ರಭು ಎಂದು ನಾಟಕೀಯವಾಗಿ ನಮಸ್ಕಾರ ಮಾಡಿದನು.

ಇದು ದೇವಾಧಿದೇವನಾದ ಶ್ರೀಕೃಷ್ಣ ಪರಮಾತ್ಮನಿಗೆ ಗೊತ್ತಾಯಿತು. ನವಿಲುಗಳ ಪವಿತ್ರವಾದ ದಾನವನ್ನು ಮನಸಾ ಸ್ವೀಕರಿಸಿದನು. ಸದಾ ತನ್ನ ಮೈಮೇಲೆ ಅಂದಿನಿಂದ ಇಂದಿನವರೆಗೂ ಧರಿಸುತ್ತಿದ್ದಾನೆ. ಕೃಷ್ಣ ಎಂದರೆ ನವಿಲುಗರಿ ನೆನಪಿಗೆ ಬರುತ್ತದೆ. ದ್ರೋಹ ಬಗೆದ ಕಳ್ಳನನ್ನು ಭೂ ದೇವಿ ಬಾಯಿಬಿಟ್ಟು ನುಂಗಿ ಬಿಟ್ಟಳು. ಪರರಿಗೆ ಉಪಕಾರ ಮಾಡಿದ ನವಿಲಿನ ನೆನಪಿಗಾಗಿ ನವಿಲು ಗರಿಯು ದೇವರಿಗೆ ಮೀಸಲಾಯಿತು. ನವಿಲು ಗರಿಯನ್ನು ಮುದುಕರು, ಮಕ್ಕಳು ಪ್ರೀತಿಸುತ್ತಾರೆ. ಧನವಂತರು ನವಿಲನ್ನು, ನವಿಲು ಗರಿಗಳಿಂದಾದ ಸುಂದರ ಬೀಸಣಿಗೆ, ಫೋಟೊ ಫ್ರೇಮುಗಳನ್ನು ಚಂದಕ್ಕಾಗಿ ತಮ್ಮ ತಮ್ಮ ಶೋಕೇಸಗಳಲ್ಲಿ ಈಗಲೂ ಇಟ್ಟಿರುತ್ತಾರೆ. ನಮ್ಮ ಸರಕಾರ ನವಿಲುಗಳನ್ನು ಹಿಡಿಯಬಾರದು, ಕೊಲ್ಲಬಾರದು ಎಂದು ಶಾಸನವನ್ನು ಮಾಡಿದೆ.

ಶ್ರೀಕೃಷ್ಣ ಪರಮಾತ್ಮನು ನವಿಲಿನ ಪರೋಪಕಾರ ಗುಣಕ್ಕೆ ಮೆಚ್ಚಿ ಪಕ್ಷಿ ರಾಜನಾದ ನವಿಲಿನ ನೆನಪಿಗಾಗಿ ಮಯೂರ ಸಿಂಹಾಸನವನ್ನು ನಿರ್ಮಿಸಿ ಅದರಲ್ಲಿ ತಾನೇ ಆತ್ಮಾನಂದಕ್ಕಾಗಿ ಪವಡಿಸುತ್ತಿದ್ದನು!

## ಕುಂಚ ಪ್ರಪಂಚ



**ತೃಪ್ತಿ**
9ನೇ ತರಗತಿ, ವಿಜಯ ವಿಠ್ಠಲ ವಿದ್ಯಾಶಾಲೆ, ಮೈಸೂರು







**ಲಾಸ್ಯಗೌರಿ ರಾಯ್**
3ನೇ ತರಗತಿ, ಇಸ್ಕಾನ್ ಶಾಲೆ, ಮುಂಬೈ



**ಡಿ. ಶಮಿತ**
4ನೇ ತರಗತಿ, ಕೇಂದ್ರೀಯ ವಿದ್ಯಾಲಯ, ಸಿ.ವಿ. ರಾಮನ್ ನಗರ, ಬೆಂಗಳೂರು



'ಸುಧಾ' ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಅವರೇ ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ವೈಯಕ್ತಿಕ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ. ವಿಳಾಸ: editorsu@sudha.co.in